# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರ ಕ್ಷೇತ್ರದಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1680 |
| ಉತ್ತರಿಸಬೇಕಾಗದ ದಿನಾಂಕ | 18.03.2026 |
| ಉತ್ತರಿಸಬೇಕಾದ ಸಚಿವರು | ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ಎಂದಿನಿಂದ ಅಸ್ತಿತ್ವಕ್ಕೆ ಬಂದಿರುತ್ತದೆ; ಈಗಿರುವ ಅಧ್ಯಕ್ಷರು ಮತ್ತು ಸದಸ್ಯರು ಯಾವಾಗ ನೇಮಕಗೊಂಡಿರುತ್ತಾರೆ; ಹಿಂದಿನ ಅಧ್ಯಕ್ಷರ ಸಹಿತವಾಗಿ ಇಲ್ಲಿಯವರಗೆ ನೇಮಕಗೊಂಡಿರುವ ಅಧ್ಯಕ್ಷರು ಮತ್ತು ಸದಸ್ಯರ ಪೂರ್ಣ ವಿವರಗಳನ್ನು ಒದಗಿಸುವುದು; | ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವು ದಿನಾಂಕ:11.07.2017ರಂದು ಅಸ್ತಿತ್ವಕ್ಕೆ ಬಂದಿರುತ್ತದೆ. ಪ್ರಸ್ತುತ, ಶ್ರೀ ರಾಕೇಶ್ ಸಿಂಗ್, (ನಿವೃತ್ತ ಐ.ಎ.ಎಸ್.) ಇವರನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ವಇ 11 ರೇರಾ 2024, ದಿನಾಂಕ:22.08.2024ರನ್ವಯ ರೇರಾ ಪ್ರಾಧಿಕಾರದ ಅಧ್ಯಕ್ಷರಾಗಿ ಮತ್ತು ಶ್ರೀ ಗುರಿಜಲ ರವೀಂದ್ರನಾದ ರೆಡ್ಡಿ(ನಿವೃತ್ತ ಐ.ಆರ್.ಎಸ್), ಇವರನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ವಇ 148 ರೇರಾ 2022, ದಿನಾಂಕ:18.11.2022 ರನ್ವಯ ರೇರಾ ಪ್ರಾಧಿಕಾರದ ಸದಸ್ಯರಾಗಿ ನೇಮಕಗೊಂಡಿರುತ್ತಾರೆ.<br><br>2017 ರಿಂದ ಇಲ್ಲಿಯವರೆಗೆ ನೇಮಕಗೊಂಡಿರುವ ಅಧ್ಯಕ್ಷರು ಹಾಗೂ ಸದಸ್ಯರುಗಳ ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಿದೆ. |
| ಆ) | ರೇರಾದಲ್ಲಿ ಇಲ್ಲಿಯವರೆಗೆ ನೋಂದಣಿಯಾಗಿರುವ ರಿಯಲ್ ಎಸ್ಟೇಟ್ ಸಂಘ ಸಂಸ್ಥೆಗಳು ಎಷ್ಟು; ನೋಂದಣಿ ಆಗದೆ ಇರುವ ರಿಯಲ್ ಎಸ್ಟೇಟ್ ಸಂಘ ಸಂಸ್ಥೆಗಳು ಎಷ್ಟು; (ವಿವರಗಳನ್ನು ಒದಗಿಸುವುದು) | ರೇರಾ ಪ್ರಾಧಿಕಾರದಲ್ಲಿ ಯಾವುದೇ ಸಂಘ ಸಂಸ್ಥೆಗಳನ್ನು ನೋಂದಣಿ ಮಾಡಿಕೊಂಡಿರುವುದಿಲ್ಲ. |
| ಇ) | ನಿಯಮ ಉಲ್ಲಂಘನೆ ಮಾಡಿರುವ ರಿಯಲ್ ಎಸ್ಟೇಟ್ ಸಂಘ ಸಂಸ್ಥೆಗಳಿಂದ ಇಲ್ಲಿಯವರಗೆ ರೇರಾ ಎಷ್ಟು ದಂಡ ವಸೂಲಾತಿ ಮಾಡಿರುತ್ತದೆ ಮತ್ತು ಬಾಕಿ ಇರುವ ದಂಡ ವಸೂಲಾತಿ ಎಷ್ಟು; (ವಿವರಗಳನ್ನು ಒದಗಿಸುವುದು); | ರೇರಾ ಪ್ರಾಧಿಕಾರಕ್ಕೆ ಸ್ವೀಕೃತವಾಗಿರುವ ದೂರುಗಳನ್ವಯ ನಿಯಮ ಉಲ್ಲಂಘನೆ ಮಾಡಿರುವ ಪ್ರವರ್ತಕರು/ ಅಭಿವೃದ್ಧಿದಾರರಿಂದ 07 ಪ್ರಕರಣಗಳಲ್ಲಿ ದಂಡ ಮೊತ್ತ ರೂ.3,65,775/-ಗಳನ್ನು ವಸೂಲಿ ಮಾಡಲಾಗಿದ್ದು, ಬಾಕಿ 243 ಪ್ರಕರಣಗಳಲ್ಲಿ ದಂಡ ಮೊತ್ತ ರೂ.27,11,09,894/-ಗಳು ವಸೂಲಾತಿಗಾಗಿ ವಿವಿಧ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದ್ದು, ಈ ಬಗ್ಗೆ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರಂತೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಕ್ರಮವಹಿಸಲಾಗುತ್ತಿದೆ. |

| | | |
|---|---|---|
| ಈ) | ರೇರಾದಲ್ಲಿ ಇರುವ ನೌಕರರು ಎಷ್ಟು; ಇದರಲ್ಲಿ ಖಾಯಂ ಸಿಬ್ಬಂದಿ ಎಷ್ಟು; ನಿಯೋಜನೆ ಮೇಲೆ ಇರುವವರು ಎಷ್ಟು; ಗುತ್ತಿಗೆ ಆಧಾರದ ಮೇಲೆ ಅಥವಾ ದಿನಗೂಲಿ ಆಧಾರದ ಮೇಲೆ ಇರುವವರು ಎಷ್ಟು; (ಪೂರ್ಣ ವಿವರಗಳನ್ನು ಒದಗಿಸುವುದು); | ರೇರಾ ಪ್ರಾಧಿಕಾರಕ್ಕೆ ವಿವಿಧ ವೃಂದದ 86 ಹುದ್ದೆಗಳನ್ನು ಸೃಜನೆ ಮಾಡಿದ್ದು, ಇದರಲ್ಲಿ ನಿಯೋಜನೆ/ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವವರ **ಪೂರ್ಣ ವಿವರಗಳನ್ನು ಅನುಬಂಧ-2**ರಲ್ಲಿ ಒದಗಿಸಿದೆ. |
| ಉ) | ರೇರಾ ಕಾರ್ಯ ವೈಖರಿಯ ಕುರಿತು ಸರ್ಕಾರಕ್ಕೆ ದೂರುಗಳು ಬಂದಿವೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಪ್ರಾಧಿಕಾರದಲ್ಲಿ ಸಲ್ಲಿಸಿರುವ ದೂರುಗಳು ಶೀಘ್ರವಾಗಿ ಇತ್ಯರ್ಥವಾಗುತ್ತಿಲ್ಲವೆಂದು ಗೃಹ ಖರೀದಿದಾರರು ಸರ್ಕಾರಕ್ಕೆ ಹಲವಾರು ದೂರುಗಳನ್ನು ಸಲ್ಲಿಸಿರುತ್ತಾರೆ.<br>ವಸತಿ ಇಲಾಖೆಯ ಸುತ್ತೋಲೆ ಸಂಖ್ಯೆ: ವಇ 79 ರೇರಾ 2021, ದಿನಾಂಕ:30.10.2021 ಮತ್ತು ತಿದ್ದುಪಡಿ ದಿನಾಂಕ:12.11.2021ರಲ್ಲಿ ಗೃಹ ಖರೀದಿದಾರರಿಂದ ಸ್ವೀಕೃತವಾಗಿರುವ ದೂರುಗಳನ್ನು ನಿಯಮ/ ಕಾಯ್ದೆಗಳನುಸಾರ ಯುಕ್ತ ಅವಧಿಯಲ್ಲಿ ಪರಿಶೀಲಿಸಿ ಅಗತ್ಯ ಕ್ರಮವಹಿಸುವಂತೆ ಹಾಗೂ ಪ್ರತಿ ತಿಂಗಳು ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ. |

ಸಂಖ್ಯೆ: ವಇ 74 ರೇರಾ 2026]

**(ಬಿ. ಝಡ್. ಜಮೀರ್ ಅಹಮದ್ ಖಾನ್)**
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು

## ಅನುಬಂಧ-1

(ಶ್ರೀ ರಮೇಶ್ ಬಾಬು, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು,
ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1680)

## ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ ಮಾನ್ಯ ಅಧ್ಯಕ್ಷರು/ ಸದಸ್ಯರುಗಳ ವಿವರ

**Chairperson:-**

| Sl No | Name of the Officer | Notifications/G.O | Regular/ In charge | Period | |
|---|---|---|---|---|---|
| | | | | From | To |
| 01 | Sri Kapil Mohan | G.O.No.DOH 157 KHB 2017. dated:14.07.2017 | Interim Authority | 14.07.2017 | 28.06.2018 |
| 02 | Sri T K Anil Kumar | | | 28.06.2018 | 20.08.2018 |
| 03 | Dr. Ravi Shankar J | | | 20.08.2018 | 07.03.2019 |
| 04 | Sri M R Kamble | DOH 24 RERA 2017. dt: 5.3.2019 | Regular | 07.03.2019 | 31.05.2021 |
| 05 | Sri H.C Kishore Chandra | DOH 16 RERA 2021, Dt: 06.05.2021 | Regular | 31.05.2021 | 21.05.2024 |
| 06 | Sri Naveen Raj Singh | DOH 67 RERA 2024. dt: 22.05.2024 | Incharge | 24.05.2024 | 22.08.2024 |
| 07 | Sri Rakesh Singh | DOH 11 RERA 2024, Dt: 22.8.2024 | Regular | 23.08.2024 | Till date |

**Members:**

| Sl No | Name of the Member | Notifications | Period | |
|---|---|---|---|---|
| | | | From | To |
| 01 | Sri Adhoni Syed Saleem | DOH 24 RERA 2017, Dt: 05.03.2019 | 06.05.2018 | 29.05.2021 |
| 02 | Sri D.Vishnuvardhana Reddy | DOH 24 RERA 2017, Dt: 05.03.2019 | 05.03.2019 | 09.10.2022 |
| 03 | Smt Neelamani N Raju | DOH 16 RERA 2021. Dt: 06.05.2021 | 31.05.2021 | 16.01.2025 |
| 04 | Sri Gurijala Ravindranadha Reddy | DOH 148 RERA 2022. Dt: 18.11.2022 | 24.11.2022 | Till date |

***

## ಅನುಬಂಧ-2

### (ಶ್ರೀ ರಮೇಶ್ ಬಾಬು, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1680)

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರಕ್ಕೆ ಮಂಜೂರಾದ ಹುದ್ದೆಗಳ ಅಧಿಕಾರಿ / ಸಿಬ್ಬಂದಿಗಳ ವಿವರ (ಖಾಯಂ, ಗುತ್ತಿಗೆ ಮತ್ತು ಹೊರಗುತ್ತಿಗೆ)

| ಕ್ರ. ಸಂ | ಮಂಜೂರಾದ ಹುದ್ದೆ | ಮಂಜೂರಾದ ಹುದ್ದೆಗಳ ಸಂಖ್ಯೆ | ಕರ್ತವ್ಯ ನಿರ್ವಹಿಸುತ್ತಿರುವ ಸಂಖ್ಯೆ | ಖಾಲಿ | ಷರಾ |
|---|---|---|---|---|---|
| 1 | ಕಾರ್ಯದರ್ಶಿ | 1 | 1 | 0 | ನಿಯೋಜನೆ |
| 2 | ನ್ಯಾಯ ನಿರ್ಣಯಾಧಿಕಾರಿ | 1 | 1 | 0 | ಗುತ್ತಿಗೆ |
| 3 | ಉಪ ಕಾರ್ಯದರ್ಶಿ | 1 | 1 | 0 | ನಿಯೋಜನೆ |
| 4 | ಹಣಕಾಸು ನಿಯಂತ್ರಕರು | 1 | 1 | 0 | ನಿಯೋಜನೆ |
| 5 | ಅಧೀನ ಕಾರ್ಯದರ್ಶಿ | 1 | 1 | 0 | ನಿಯೋಜನೆ |
| 6 | ಅಧ್ಯಕ್ಷರ ಆಪ್ತ ಕಾರ್ಯ ದರ್ಶಿ | 1 | 1 | 0 | ನಿಯೋಜನೆ |
| 7 | ಸಹಾಯಕ ಕಾರ್ಯಪಾಲಕ ಅಭಿಯಂತರರು | 1 | 1 | 0 | ನಿಯೋಜನೆ |
| 8 | ಸಹಾಯಕ ನಿರ್ದೇಶಕರು (ನಗರ ಯೋಜನೆ) | 2 | 1 | 1 | ನಿಯೋಜನೆ |
| 9 | ಲೆಕ್ಕಾಧಿಕಾರಿ | 1 | 0 | 1 | ಖಾಲಿ |
| 10 | ತಹಶೀಲ್ದಾರ್ | 1 | 1 | 0 | ನಿಯೋಜನೆ |
| 11 | ಶಾಖಾಧಿಕಾರಿ | 2 | 1 | 1 | 1-ನಿಯೋಜನೆ<br>1-ಖಾಲಿ |
| 12 | ಸಹಾಯಕ ಅಭಿಯಂತರರು | 2 | 1 | 1 | 1-ಹೊರಗುತ್ತಿಗೆ<br>1-ಖಾಲಿ |
| 13 | ಕಿರಿಯ ಅಭಿಯಂತರರು | 1 | 0 | 1 | ಖಾಲಿ |
| 14 | ಡಾಕ್ಯುಮೆಂಟ್ ರೈಟರ್ | 1 | 1 | 0 | ಗುತ್ತಿಗೆ |
| 15 | ಶಿರಸ್ತೇದಾರರು | 4 | 4 | 0 | 2-ಹೊರಗುತ್ತಿಗೆ<br>1-ನಿಯೋಜನೆ<br>1-ಖಾಲಿ |
| 16 | ತೀರ್ಪು ಬರಹಗಾರರು | 4 | 4 | 0 | ಗುತ್ತಿಗೆ |
| 17 | ಶೀಘ್ರಲಿಪಿಗಾರರು | 8 | 3 | 5 | 1-ಗುತ್ತಿಗೆ<br>2-ಹೊರಗುತ್ತಿಗೆ<br>4-ಖಾಲಿ |
| 18 | ಸಹಾಯಕರು /ಪ್ರಥಮ ದರ್ಜೆ ಸಹಾಯಕರು | 7 | 7 | 0 | 2-ನಿಯೋಜನೆ<br>5-ಹೊರಗುತ್ತಿಗೆ |
| 19 | ರಾಜಸ್ವ ನಿರೀಕ್ಷಕರು | 2 | 0 | 2 | ಖಾಲಿ |
| 20 | ಭೂ ಮಾಪಕರು | 2 | 1 | 1 | ಖಾಲಿ |
| 21 | ಲೆಕ್ಕ ಸಹಾಯಕರು | 5 | 5 | 0 | ಹೊರಗುತ್ತಿಗೆ |
| 22 | ಡಾಟಾ ಎಂಟ್ರಿ ಆಪರೇಟರ್ಸ್ | 7 | 7 | 0 | ಹೊರಗುತ್ತಿಗೆ |
| 23 | ವಾಹನ ಚಾಲಕರು | 6 | 6 | 0 | ಹೊರಗುತ್ತಿಗೆ |
| 24 | ಗ್ರೂಪ್-ಡಿ | 11 | 10 | 1 | ಹೊರಗುತ್ತಿಗೆ |
| 25 | ಕಿರಿಯ ಸಹಾಯಕರು | 4 | 4 | 0 | ಹೊರಗುತ್ತಿಗೆ |

-2-

| | | | | | |
|---|---|---|---|---|---|
| 26 | ಸಾರ್ವಜನಿಕ ಸಂಪರ್ಕಾಧಿಕಾರಿ | 1 | 0 | 1 | ಖಾಲಿ |
| 27 | ಸಿಸ್ಟಂ ಅನಾಲಿಸ್ಟ / ಪ್ರಾಜೆಕ್ಟ್ ಮ್ಯಾನೇಜರ್ | 1 | 1 | 0 | ಹೊರಗುತ್ತಿಗೆ |
| 28 | ಪ್ರೋಗ್ರಾಮರ್ | 1 | 1 | 0 | ಹೊರಗುತ್ತಿಗೆ |
| 29 | ಸಿಸ್ಟಂ ಅನಾಲಿಸ್ಟ ಅಸಿಸ್ಟೆಂಟ್ | 1 | 1 | 0 | ಹೊರಗುತ್ತಿಗೆ |
| 30 | ಎಂ.ಐ.ಎಸ್. ಕನ್ಸಲ್ ಟೆಂಟ್ | 1 | 0 | 1 | ಖಾಲಿ |
| 31 | ಕಾನೂನು ಸಲಹೆಗಾರರು | 1 | 1 | 0 | ಗುತ್ತಿಗೆ |
| 32 | ಕಾನೂನು ಸಹಾಯಕರು | 1 | 1 | 0 | ಹೊರಗುತ್ತಿಗೆ |
| 33 | ಲಾ ಕ್ಲರ್ಕ್ | 2 | 0 | 2 | ಖಾಲಿ |
| | **ಒಟ್ಟು** | **86** | **68** | **18** | |

**ಟಿಪ್ಪಣಿ**: ಸರ್ಕಾರದಿಂದ ಮಂಜೂರಾದ 86 ಹುದ್ದೆಗಳ ಪೈಕಿ ನಿಯೋಜನ ಮೇಲೆ 12 ಅಧಿಕಾರಿ / ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಉಳಿದಂತೆ 7 ಸಿಬ್ಬಂದಿಗಳು ಗುತ್ತಿಗೆ ಆಧಾರದ ಮೇಲೆ. 49 ಸಿಬ್ಬಂದಿಗಳು ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಪ್ರಸ್ತುತ 18 ಹುದ್ದೆಗಳು ಖಾಲಿ ಇರುತ್ತದೆ.

***